# 3 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು

# ಜೆ.ಎಂ.ಎಫ್.ಸಿ. ನ್ಯಾಯಾಲಯ, ಹುಬ್ಬಳ್ಳಿ

**MVC 176/2016** **CW- 2**

| | |
|---|---|
| ಸಾಕ್ಷಿಯ ಹೆಸರು | ಃ ಶಕುಂತಲಾ ಹಾವನೂರ |
| ತಂದೆ /ಗಂಡನ ಹೆಸರು | ಃ ಬಾಬುರಾವ |
| ವಯಸ್ಸು | ಃ 68 ವರ್ಷ |
| ಉದ್ಯೋಗ | ಃ ನಿವೃತ್ತ ಎ ಎಸ್ ಐ |
| ವಾಸಸ್ಥಳ | ಃ ಹಾಲಿ ಮೈಸೂರ |

ದಿಃ **17.12.2025** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.

**ಮುಖ್ಯ ವಿಚಾರಣೆಃ ಎದುರುದಾರರ ಪರ ಶ್ರೀ ಎಮ್ ಎಸ್ ಬಿ ವಕೀಲರಿಂದಃ**

ಧಾರವಾಡ ಗ್ರಾಮೀಣ ಪೊಲೀಸ್ ಠಾಣೆಯಲ್ಲಿ 2010 ರಿಂದ 2014 ರವರೆಗೂ ಮುಹ್ಯ ಪೇದೆಯಾಗಿ ಕಾರ್ಯ ನಿರ್ವಹಿಸಿದ್ದೇನೆ. 2014 ರಿಂದ 2017 ರವರೆಗೆ ಅದೇ ಠಾಣೆಯಲ್ಲಿ ಎ ಎಸ್ ಐ ಆಗಿ ಕಾರ್ಯರ್ವಹಿಸಿದ್ದೇನೆ. ಧಾರವಾಡ ಗ್ರಾಮೀಣ ಪೊಲಿಸ್ ಠಾಣೆ ಕ್ರೈಮ್ ಸಂಖೆ 199/2019 ರಲ್ಲಿ ನಾನು ಬಾರತಿಯ ದಂಡ ಸಂಹಿತೆ ಕಲಂ 279,338 ರಡಿಯಲ್ಲಿ ಪ್ರ ವ ವರದಿ ದಾಖಲಿಸಿದೆ. ದಿಃ 04.09.2015 ರಂದು ದ್ವಿಚಕ್ರ ವಾಹನ ಬಂದು ಹೊಡೆದಿದೆ ಅಂತಾ ದಿಃ 07.09.2015 ರಂದು ದೂರು ಕೊಟ್ಟರು. ಸಾಯಂಕಾಲ 7.30 ಕ್ಕೆ ನಾನು ಪ್ರ ವ ವರದಿ ದಾಖಲಿಸಿದೆ. ಮರುದಿವಸ ಬೆಳಿಗ್ಗೆ 9.30 ರಿಂದ 10 ರ ಸಮಯದಲ್ಲಿ ಶಿವಳ್ಳಿ ಬಸ್ ನಿಲ್ದಾಣಕ್ಕೆ ಹೋದೆ. ಗುನ್ಹಾ ಸ್ಥಳದ ಪಂಚನಾಮೆ ಮಾಡಿದೆ. ನಾನು ಎಮ್ ಎಲ್ ಸಿ ಅಟೆಂಡ್ ಮಾಡಿದೆ. ಐಃ 11.09.2015 ರಂದು ಆ ವ್ಯಕ್ತಿ ಎಸ್ ಡಿ ಎಮ್ ಆಸ್ಪತ್ರೆ ಸತ್ತೂರ ಧಾರವಾಡ ಇವರಲ್ಲಿ ಮೃತ ಆದ. ನಂತರ ಶವ ಪಂಚನಾಮೆ ಮಾಡಿ ಪಿ ಎಮ್ ಆದ ನಂತರ ತನಿಖಾಧಿಕಾರಿ ಆದ ಮೋತಿಲಾಲ ಆರ್ ಪವಾರ ಸಿಪಿಐ ರವರಿಗೆ ಚಾರ್ಜ್ ನೀಡಿದೆ.

2. ಎಮ್ ಎಲ್ ಸಿ ಬಗ್ಗೆ ವಿಚಾರ ಮಾಡಿದ್ದೀರಾ ಅಂತಾ ಕೇಳಿದ ಪ್ರಶ್ನೆಗೆ ಸಾಕ್ಷಿ ಮೃತನ ಸಂಬಂದಿಕರಾದ ಫಿರ್ಯಾದಿಯು ಮೊದಲಿಗೆ ಲೋಕಲ್ ಡಾಕ್ಟರ ಹತ್ತಿರ ತೊರಿಸಿದ್ದೇವೆ ಅಂತಾ ಹೇಳಿದ. ಡಾಕ್ಟರ ಕಡೆಯಿಂದ ಮಲ್ಲಿಕಾರ್ಜುನ ತಂದೆ ಮರಿಯಪ್ಪ ಕೊಳ್ಳೆಪ್ಪನವರ ಈತ ಮಾತನಾಡುವ ಸ್ಥಿತಿಯಲ್ಲಿಲ್ಲ ಅಂತಾ ಪ್ರಮಾಣ ಪತ್ರ ಪಡೆದುಕೊಂಡೆ.

ಮೊದಲು ತೋರಿಸಿದ ಲೋಕಲ್ ಡಾಕ್ಟರ ಹತ್ತಿರ ನಾನು ಏನು ಪಡೆದುಕೊಂಡಿಲ್ಲ ಮತ್ತು ಅವರನ್ನು ವಿಚಾರಣೆ ಮಾಡಿಲ್ಲ.

**ಈ ಹಂತದಲ್ಲಿ ಎದುರುದಾರ ನಂ.3 ರ ಪರ ವಕೀಲರು ತಮ್ಮ ಸಾಕ್ಷಿಯನ್ನು ಪಾಟಿಸವಾಲು ಮಾಡಲು ಅನುಮತಿ ಕೋರಿದ್ದು ಅನುಮತಿ ನೀಡಲಾಯಿತು.**

**ಪಾಟಿಸವಾಲುಃ ಶ್ರೀ ಎಮ್ ಎಸ್ ಬಿ ವಕೀಲರಿಂದಃ**

ಮೃತ ವ್ಯಕ್ತಿ ಈ ಮೊದಲು ಬೇರೆ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿದ್ದಾನೆ ಎನ್ನುವುದು ತಿಳಿದು ಬಂದಿತ್ತು ಎಂದರೆ ಸರಿ. ಆರ್ ಟಿ ಎ ಪ್ರಕರಣದಲ್ಲಿ ಮೊದಲು ಯಾರು ಚಿಕಿತ್ಸೆ ನೀಡಿರುತ್ತಾರೊ ಅದೇ ವೈದ್ಯರು ಗಾಯದ ಪ್ರಮಾಣಪತ್ರ ನೀಡಬೇಕು ಎಂದರೆ ಸರಿ. ಎಮ್ ಎಲ್ ಸಿ ವರದಿ ಗಾಯದ ಇತಿಹಾಸ (ಕಾರಣ) ತೋರಿಸುವ ವರದಿ ಎಂದರೆ ಸರಿ. ಪ್ರಥಮ ಚಿಕಿತ್ಸೆ ನೀಡಿದ ವೈದ್ಯರ ಎಮ್ ಎಲ್ ಸಿ ಪ್ರಮಾಣಪತ್ರ ಪ್ರಾಥಮಿಕ ಸಾಕ್ಷ್ಯ ಎಂದರೆ ಸರಿ. ಎಮ್ ಎಲ್ ಸಿಯಲ್ಲಿ ಗಾಯಾಳುವಿಗಾಗಲಿ ಹಾಗೂ ಮೃತನಿಗಾಗಲಿ ಯಾವ ಕಾರಣಕ್ಕೆ ಗಾಯ ಆಗಿತ್ತು ಅಂತಾ ಬರೆದಿರುತ್ತಾರೆ ಎಂದರೆ ಸರಿ. ರಸ್ತೆಯಲ್ಲಿ ಅಪಘಾತ ಆಗಿತ್ತು ಎಂದರೆ ವೈದ್ಯರು ಚಿಕ್ಕದಾಗಿ ಆರ್ ಟಿ ಎ ಅಂತಾ ಬರೆದಿರುತ್ತಾರೆ ಎಂದರೆ ಸರಿ. ಹಲ್ಲೆಯ ಹಿನ್ನೆಲೆ ಇದ್ದರೆ ಎಮ್ ಎಲ್ ಸಿ ಯಲ್ಲಿ ಹಲ್ಲೆ ಅಂತಾ ಬರೆದಿರುತ್ತಾರೆ ಎಂದರೆ ಸರಿ. ನನ್ನ ತನಿಖೆಯ ಅವಧಿಯಲ್ಲಿ ಸ್ಥಾನಿಕ ವೈದ್ಯರಿಂದ ಎಮ್ ಎಲ್ ಸಿ ಪ್ರಮಾಣಪತ್ರ ಪಡೆಯಲು ಪ್ರಯತ್ನ ಮಾಡಿಲ್ಲ ಎಂದರೆ ಸರಿ. ಸ್ಥಾ,ನಿಕ ವೈದ್ಯರಿಂದ ಎಮ್ ಎಲ್ ಸಿ ಪ್ರಮಾಣಪತ್ರ ಪಡೆದಿದ್ದರೆ ಅದು ರಸ್ತೆ ಅಪಘಾತದಿಂದ ಗಾಯ ಆಗಿತ್ತೊ ಅಥವಾ ಹಲ್ಲೆಯ ಹಿನ್ನೆಲೆಯಿಂದ ಗಾಯ ಆಗಿತ್ತೊ ಎನ್ನುವುದು ಹಾಗೂ ಇನ್ನಾವುದೊ ಕಾರಣದಿಂದ ಗಾಯ ಆಗಿತ್ತು ಎನ್ನುವುದು ಗೊತ್ತಾಗುತ್ತಿತ್ತು ಎಂದರೆ ಸರಿ. ದೂರು ಕೊಡುವಾಗ ಫಿರ್ಯಾದಿ ಮೃತನನ್ನು ಮೊದಲಿಗೆ ಹೆಬ್ಬಳ್ಳಿಯ ಆಲೂರ ವೈದ್ಯರಿಂದ ಚಿಕಿತ್ಸೆ ಕೊಡಿಸಿದ್ದೇನೆ ಅಂತಾ ಹೇಳಿದ ಎಂದರೆ ಸರಿ. ನಿಪಿ.15 ದಾಖಲಾತಿಯಲ್ಲಿ ಮೃತ ವ್ಯಕ್ತಿ ಮೊದಲಿಗೆ ಬಿದ್ದು ಗಾಯಪಡಿಸಿಕೊಂಡ ಎಂಬ ಬಗ್ಗೆ ಬರೆದಿದೆ ಎಂದರೆ ಸರಿ. ಎಸ್ ಡಿ ಎಮ್ ಆಸ್ಪತ್ರೆಯವರ ವೈದ್ಯಕೀಂದು ದಾಖಲಾತಿಗಳನ್ನು ನೋಡಿದಾಗ ಗಾಯಾಳುವನ್ನು ಸ್ಥಾನಿಕ ವೈದ್ಯರಾದ ಡಾ. ಆಲೂರ ರವರು ಹೆಚ್ಚಿನ ಚಿಕಿತ್ಸೆಗೆ refer ಮಾಡಿದ್ದಾರೆ ಅಂತಾ ಉಲ್ಲೇಖ ಇದೆ ಎಂದರೆ ಸರಿ. ಡಾ. ಆಲೂರ ಇವರ ಕಡೆ ಎಮ್

ಎಲ್ ಸಿ ಪಡೆಯುವುದು ನನ್ನ ಆದ್ಯ ಕರ್ತವ್ಯ ಆಗಿತ್ತು ಎಂದರೆ ಸರಿ. ಡಾ. ಆಲೂರ ಇವರ ಹೇಳಿಕೆ ದಂಡ ಪ್ರಕ್ರಿಯಾ ಸಂಹಿತೆ ಕಲಂ 161 ರಡಿಯಲ್ಲಿ ದಾಖಲಿಸಿಕೊಂಡಿಲ್ಲ ಎಂದರೆ ಸರಿ. ಡಾ. ಆಲೂರ ವೈದ್ಯರ ಪ್ರಮಾಣಪತ್ರ ನಿಪಿ.15 ರಂತೆ ಮೃತ ವ್ಯಕ್ತಿ ಮೊದಲಿಗೆ ಬಿದ್ದು ಗಾಯಪಡಿಸಿಕೊಂಡಿದ್ದ ಎಂದರೆ ಸರಿ. ಬಿದ್ದು ಗಾಯಪಡಿಸಿಕೊಂಡ ವ್ಯಕ್ತಿಯ ಪ್ರಕರಣವನ್ನು ನಾನು ಆರ್ ಟಿ ಎ ಪ್ರಕರಣ ಅಂತಾ ಮಾಡಿದ್ದೇನೆ ಎಂದರೆ ಸರಿ. ಬಿದ್ದು ಗಾಯಪಡಿಸಿಕೊಂಡ ವ್ಯಕ್ತಿಯ ಪ್ರಕರಣವನ್ನು ಆರ್ ಟಿ ಎ ಪ್ರಕರಣ ಅಂತಾ ತಿರುಚಲು ಬರುವುದಿಲ್ಲ ಎಂದರೆ ಸರಿ. ಸಾಕ್ಷಿ  ಮುಂದುವರೆದು ಈ ವಿಷಯ ಮೊದಲೇ ಗೊತ್ತಿದ್ದರೆ ಆ ರೀತಿ ಮಾಡುತ್ತಿರಲಿಲ್ಲ ಎಂದು ನುಡಿಯುತ್ತಾರೆ. ಆದೇ ರೀತಿ ದೂರು ಕೊಟ್ಟ ಪ್ರಕಾರವೇ ಪ್ರಥಮ ವರ್ತಮಾನ ವರದಿ ದಾಖಲಿಸಿದೆ ಎಂದು ನುಡಿಯುತ್ತಾರೆ. ತನಿಖಾಧಿಕಾರಿ ಅಪರಾಧಿಕ ಪ್ರಕರಣದಲ್ಲಿ ಸತ್ಯಾಸತ್ಯತೆಯನ್ನು ಕಂಡುಹಿಡಿಯುವ ಜಾಣ್ಮೆಯನ್ನು ಉಪಯೋಗಿಸಿ ಅಂತಾ ಕೌಶಲ್ಯವನ್ನು ಹೊಂದಿರುತ್ತಾನೆ ಎಂದರೆ ಸರಿ. ಎಷ್ಟೂ ಪ್ರಕರಣಗಳಲ್ಲಿ ತನಿಖಾಧಿಕಾರಿಗೆ ಸುಳ್ಳು ಅಂತಾ ಗೊತ್ತಾದಾಗ ಬಿ ಅಂತಾ ವರದಿ ಸಲ್ಲಿಸುತ್ತಾರೆ ಎಂದರೆ ಸರಿ. ಡಾ.ಆಲೂರ ಇವರು ವರದಿ ಕೊಟ್ಟಂತೆ ಇದು ಬಿದ್ದು ಗಾಯಪಡಿಸಿಕೊಂಡ ಪ್ರಕರಣವಾಗಿದ್ದು ಮೆಲ್ನೋಟಕ್ಕೆ ಇದು ಆರ್ ಟಿ ಎ ಪ್ರಕರಣ ಆಗಿಲ್ಲ ಅಂತಾ ಕೇಳಿದ ಪ್ರಶ್ನೆಗೆ ಸಾಕ್ಷಿ ತನಗೆ ಆ ರೀತಿ ಕಂಡುಬಂದಿಲ್ಲ ಎಂದು ನುಡಿಯುತ್ತಾರೆ. ಮೊದಲಿಗೆ ಚಿಕಿತ್ಸೆ ನೀಡಿದ ವೈದ್ಯರ ಬಳಿಯೆ ಗಾಯದ ಪ್ರಮಾಣಪತ್ರ ಸಂಗ್ರಹಿಸುವ ಹೊಣೆಗಾರಿಕೆ ತನಿಖಾಧಿಕಾರಿ ಹೊಂದಿರುತ್ತಾನೆ ಎಂದರೆ ಸರಿ. ಈ ಪ್ರಕರಣದಲ್ಲಿ ಸ್ಥಳಿಯ ವೈದ್ಯರಾದ ಆಲೂರ ಇವರ ಹೇಳಿಕೆ ಮತ್ತು ವೈದ್ಯಕೀಯ ಪ್ರಮಾಣಪತ್ರ ಪಡೆದಿಲ್ಲ ಎಂದರೆ ಸರಿ. ಈ ಪ್ರಕರಣದಲ್ಲಿ ವೈದ್ಯಕೀಯ ಪ್ರಮಾಣಪತ್ರ ಮತ್ತು ಹೇಳಿಕೆ ಪಡೆಯದೇ ಇರುವುದು ತನಿಖಾಧಿಕಾರಿ ಲೋಪ ಎಂದರೆ ಸರಿಯಲ್ಲ. ತನಿಖಾಧಿಕಾರಿ ಪ್ರತಿ ಪ್ರಕರಣದಲ್ಲಿ ಸಾಕ್ಷ್ಯ ಸಂಗ್ರಹಿಸುವ ಆದ್ಯ ಕರ್ತವ್ಯ ಅಂದಿರುತ್ತಾನೆ ಎಂದರೆ ಸರಿ. ಈ ಪ್ರಕರಣವನ್ನು ತಪ್ಪು ಮಾರ್ಗದರ್ಶನ ದಲ್ಲಿ ಆರ್ ಟಿ ಎ ಪ್ರಕರಣ ಅಂತಾ ತನಿಖೆ ಮಾಡಿದ್ದೇವೆ ಎಂದರೆ ಸರಿಯಲ್ಲ. ತನಿಖೆಯ ಕಾಲಕ್ಕೆ ಇದು ಆರ್ ಟಿ ಎ ಪ್ರಕರಣ ಅಲ್ಲ ಅಂತಾ ತಿಳಿದು ಬಂದಿತ್ತು ಎಂದರೆ ಸರಿಯಲ್ಲ. ಆದರೂ ನಾನು ಮಾಡುವ ಕರ್ತವ್ಯದಲ್ಲಿ ಲೋಪ ಮಾಡಿ ಇದು ಆರ್ ಟಿ ಎ ಪ್ರಕರಣ ಅಂತಾ ಬಿಂಬಿಸಿದ್ದೇನೆ ಎಂದರೆ ಸರಿಯಲ್ಲ.

**ಪಾಟಿಸವಾಲುಃ ಅರ್ಜಿದಾರರ ಪರ ಶ್ರೀ ಎ ಕೆ ಎನ್ ವಕೀಲರಿಂದಃ**

ದಿಃ 04.09.2015 ರಂದು ಅಪಘಾತ ಆಗಿದೆ. ದೂರನ್ನು ಮೃತನ ಚಿಕ್ಕಪ್ಪ ನೀಡಿದ್ದಾರೆ. ನಾನು ಈ ಪ್ರಕರಣದಲ್ಲಿ ದೊಷಾರೋಪಣ ಪಟ್ಟಿ ಸಲ್ಲಿಸಿಲ್ಲ ಎಂದರೆ ಸರಿ. ನಮ್ಮ ಮೇಲಾಧಿಕಾರಿಗಳು ಚೌಕಾಶಿ ಮಾಡಿ ಹಾಗೂ ತನಿಖೆ ಮಾಡಿ ಸಾಕ್ಷ್ಯಾದಾರಗಳನ್ನು ಸಂಗ್ರಹಿಸಿ ದೋಷಾರೋಪಣ ಪಟ್ಟಿ ಸಲ್ಲಿಸಿರುತ್ತಾರೆ ಎಂದರೆ ಸರಿ. ಇದು ಆರ್ ಟಿ ಎ ಪ್ರಕರಣ ಆಗಿದ್ದು ಬೇರೆ ಯಾವದೇ ತೆರನಾಗಿ ಬಿದ್ದು ಪೆಟ್ಟು ಮಾಡಿಕೊಂಡ ಪ್ರಕರಣ ಅಲ್ಲ ಎಂದರೆ ಸರಿ.

(ನನ್ನ ಉಕ್ತಲೇಖದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)
ಓ ಹೇ ಕೆ ಸರಿ ಇದೆ.

**(**ಶ್ರೀ ರಮೇಶ ಎಸ್ ಗಾಣಿಗೇರ**)**
**3** ನೇ ಅಧಿಕ ಹಿ.ದಿ.ನ್ಯಾ.ಹುಬ್ಬಳ್ಳಿ.